ದಿನಾಂಕಃ 16-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ** ರವರ ಪರ ವಕೀಲರಿಂದ,

1) ಯಶೋದಾ ನನ್ನ ತಾಯಿ. ಅರ್ಜಿದಾರರು ನನಗೆ ಚಿಕ್ಕಪ್ಪ ಆಗಬೇಕು. ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆಯ ನಡುವೆ ಸುಮಾರು ವರ್ಷಗಳ ಹಿಂದೆ ವಿಭಾಗ ಆಗಿರುತ್ತದೆ ಎಂದರೆ ಸರಿ. ವಿಭಾಗದಂತೆ ಪ್ರತ್ಯೇಕವಾಗಿ ಖಾತೆ ನಮೂದಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ಅರ್ಜಿದಾರರು ನಡುವೆ ವಿಭಾಗ ಆದನಂತರ ಅರ್ಜಿದಾರರು ಸರ್ವೇ ನಂ. 235 ರಲ್ಲಿರುವ 24 ಗುಂಟೆ ಆಸ್ತಿಯನ್ನು ದಿನಾಂಕ 21/04/1977 ರಲ್ಲಿ ಖರೀದ ಮಾಡಿರುತ್ತಾರೆ ಎಂದರೆ ಸರಿ. ಕ್ರಯ ಪತ್ರದ ಆದಾರದ ಮೇಲೆ ಖಾತೆ ಆಗಿರುತ್ತದೆ ಎಂದರೆ ಸರಿ.

2) ಭೂ-ಸ್ವಾಧೀನಾಧಿಕಾರಿಗಳು ಅರ್ಜಿದಾರರ ಹೆಸರಿನಲ್ಲಿರುವ ಕಂದಾಯ ದಾಖಲಾತಿಗಳನ್ನು ಪರಿಶೀಲಿಸಿ ಭೂಸ್ವಾಧೀನ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 1998 ನೇ ಸಾಲಿನಲ್ಲಿ ವಿಭಾಗ ಆದಾಗ ಸರ್ವೇ ನಂ.235 ರಲ್ಲಿರುವ 24 ಗುಂಟೆ ಆಸ್ತಿಯಲ್ಲಿ 1/3 ಹಿಸ್ಸೆ ನನ್ನ ತಾಯಿಯ ಭಾಗಕ್ಕೆ ಬಂದಿರುತ್ತದೆ. ಸರ್ವೇ ನಂ. 235 ರಲ್ಲಿರುವ 24 ಗುಂಟೆ ಅರ್ಜಿದಾರರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. 1998 ನೇ ಸಾಲಿನಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. 1998 ನೇ ಸಾಲಿನಲ್ಲಿ ವಿಭಾಗ ಆಗಿರುವ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ತೊಂದರೆ ಕೊಡುವ ಸಲುವಾಗಿ ಭೂ-ಸ್ವಾಧೀನಾಧಿಕಾರಿಗಳ ಸಮಕ್ಷಮ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಹಣದಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ